ಸಂಯುಕ್ತ ಕರ್ನಾಟಕ

Saturday, May 8th, 2010

# ಜೈನ್ ವಿದ್ಯಾನಿಕೇತನ್ ಶಾಲೆಗೆ 100 ಫಲಿತಾಂಶ

ಹಾರೋಹಳ್ಳಿ, ಮೇ 7: ಕಳೆದ ಏಪ್ರಿಲ್‌ನಲ್ಲಿ ನಡೆದಿದ್ದ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶ ಪ್ರಕಟಗೊಂಡಿದ್ದು ಕನಕಪುರ ತಾಲ್ಲೂಕಿನಲ್ಲಿ ಜಕ್ಕಸಂದ್ರದ ಜೈನ್ ವಿದ್ಯಾನಿಕೇತನ್ ಶಾಲೆಯು ಶೇ. 100 ಫಲಿತಾಂಶ ಪಡೆಯುವುದರೊಂದಿಗೆ ತಾಲ್ಲೂಕಿನಲ್ಲಿ ಮೊದಲ ಶಾಲೆಯಾಗಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶಿವರಾಮೇಗೌಡ ತಿಳಿಸಿದ್ದಾರೆ. ಅವರು ಪತ್ರಿಕೆಯೊಂದಿಗೆ ದೂರವಾಣಿ ಮೂಲಕ ಮಾತನಾಡಿ, ತಾಲ್ಲೂಕಿನ 66 ಶಾಲೆಯಿಂದ 2362 ಬಾಲಕರು, 2138 ಬಾಲಕಿಯರು ಪರೀಕ್ಷೆಗೆ ಕುಳಿತಿದ್ದು ಅವರಲ್ಲಿ 1389 ಬಾಲಕರು, 1374 ಬಾಲಕಿಯರು 63.83 ನೊಂದಿಗೆ ತೇರ್ಗಡೆಯಾಗಿದ್ದಾರೆಂದರು.

ತಾಲ್ಲೂಕಿನ 36 ಸರ್ಕಾರಿ ಶಾಲೆಗಳ 545 ಬಾಲಕರು, 616 ಬಾಲಕಿಯರು 58.77 ನೊಂದಿಗೆ ತೇರ್ಗಡೆಯಾಗಿದ್ದು, ಅನುದಾನಿತ ಶಾಲೆಯ 500 ಬಾಲಕರು, 442 ಬಾಲಕಿಯರು ಶೇ. 58.32 ಮತ್ತು 18 ಅನುದಾನರಹಿತ ಶಾಲೆಯ 344 ಬಾಲಕರು ಮತ್ತು 316 ಬಾಲಕಿಯರು ಶೇ. 74.4ನೊಂದಿಗೆ ತೇರ್ಗಡೆಯಾಗಿದ್ದಾರೆಂದು ತಿಳಿಸಿದರು. ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಅಭಿನಂದಿಸಿರುವ ಶಿವರಾಮೇಗೌಡರು ಅನುತ್ತೀರ್ಣ ವಿದ್ಯಾರ್ಥಿಗಳು ಆತ್ಮಸ್ಥೈರ್ಯ ಕಳೆದುಕೊಳ್ಳದೆ ಜೂನ್ 7 ರಿಂದ ಪ್ರಾರಂಭಗೊಳ್ಳುವ ಪೂರಕ ಪರೀಕ್ಷೆಗೆ ಸೂಕ್ತ ತಯಾರಿ ನಡೆಸಿ ಯಶಸ್ಸುಗಳಿಸಬೇಕೆಂದರು.

ಬನವಾಸಿಯ ಸರ್ಕರಿ ಪ್ರೌಢಶಾಲೆ ಶೇ. 95, ಹಾರೋಬೆಲೆಯ ಆರ್.ಪಿ. ಪ್ರೌಢಶಾಲೆ ಅನುದಾನಿತ ಶೇ. 80, ಜಕ್ಕಸಂದ್ರದ ಜೈನ್ ವಿದ್ಯಾನಿಕೇತನ್ ಅನುದಾನರಹಿತ ಪ್ರೌಢಶಾಲೆ ಶೇ. 100 ಗಳಿಸುವುದರೊಂದಿಗೆ ಉತ್ತಮ ಸಾಧನೆ ತೋರಿದ ಶಾಲೆಗಳಾಗಿವೆ ಎಂದರು.

**ಸಾಧನೆ:** ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶದಲ್ಲಿ ಕನಕಪುರ ತಾಲ್ಲೂಕಿನಲ್ಲಿಯೇ ಅತಿ ಹೆಚ್ಚು ಸಾಧನೆ ನೀಡಿಧ ಜೈನ್ ವಿದ್ಯಾನಿಕೇತನ್ ಶೇ. 100 ರಷ್ಟು ಫಲಿತಾಂಶ ಪಡೆದಿದೆಯೆಂದು ಶಾಲಾ ಪ್ರಾಂಶುಪಾಲ ಬಿ.ಪಿ. ಕಿಶೋರ್ ತಿಳಿಸಿದ್ದಾರೆ.

ಶಾಲೆಯ ಅಶ್ವಿನಿ ಎಚ್.ವಿ. 596|625 ಅಂಕಗಳಿಸಿ (95.36) ಪ್ರಥಮ ಸ್ಥಾನ, ತನ್ವೀರ್ ಅಲಿಖಾನ್ 591|625 ಅಂಕಗಳಿಸಿ (94.56)

ಸಿಂಧೂ ಜಿ.ಆರ್. 574\625 ಅಂಕಗಳಿಸಿ (91.85) ಶಾಲೆಯ ಮೊದಲ ಮೂರು ಉತ್ತಮ ಸಾಧನೆಗಳಿಸಿದ ವಿದ್ಯಾರ್ಥಿಗಳೆನಿಸಿದ್ದಾರೆ. ಶಾಲೆಯಿಂದ 128 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಅವರಲ್ಲಿ 9 ಅತ್ಯುನ್ನತ ಶ್ರೇಣಿ, 75 ಪ್ರಥಮ ಶ್ರೇಣಿ, 36 ದ್ವಿತೀಯ ಶ್ರೇಣಿ, 8 ತೃತೀಯ ಶ್ರೇಣಿ ಪಡೆದು ಶಾಲೆಗೆ ಪ್ರಥಮ ಸ್ಥಾನ ತಂದಿದ್ದಾರೆ. ಶಾಲೆಯು ಸತತವಾಗಿ 7ನೇ ಬಾರಿ ಶೇ. 100 ರಷ್ಟು ಸಾಧಿಸಿರುವುದು ಹೆಮ್ಮೆಯ ವಿಷಯವಾಗಿದೆ. ಪರೀಕ್ಷೆಯಲ್ಲಿ ಯಶಗಳಿಸಿದ ವಿದ್ಯಾರ್ಥಿಗಳಿಗೆ ಪ್ರಾಂಶುಪಾಲರು ಅಭಿನಂದಿಸಿದ್ದಾರೆ.

---

ಕನಕಪುರದ ಜೈನ್ ಕಾಲೇಜಿನ ಪ್ರೀತಮ್ ಎಸ್.ರಾಜ್ ವಿಜ್ಞಾನ ವಿಭಾಗದಲ್ಲಿ 571 ಅಂಕಗಳನ್ನು ಪಡೆದು ವಿಜ್ಞಾನ ವಿಭಾಗದಲ್ಲಿ ಅತಿ ಹೆಚ್ಚು ಅಂಕ ಪಡೆದ ದ್ವಿತೀಯ ವಿದ್ಯಾರ್ಥಿ ಎನಿಸಿದ್ದಾನೆ. ವಾಣಿಜ್ಯ ವಿಭಾಗದಲ್ಲಿ ಮಾಗಡಿಯ ಅಲ್ಲಾಪ್ಪ ಕಾಲೇಜಿನ ವಿದ್ಯಾರ್ಥಿನಿ ಜಾನಕಿ ಬಾಯಿ ಸಿಂಧ್ಯಾ 569 ಅಂಕಗಳನ್ನು ಮತ್ತು ಮಾಗಡಿಯ ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಬಿ.ಆರ್.ಕವಿತಾ ಕಲಾ ವಿಭಾಗದಲ್ಲಿ 516 ಅಂಕಗಳನ್ನು ಪಡೆದಿದ್ದಾಳೆ.